**ದಿಃ30.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದ ಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು ನಿಪಿ.1
2. ದೂರಿನ ದೃಢೀಕೃತ ನಕಲು ನಿಪಿ.2
3. ಅಪರಾಧ ವಿವರ ನಮೂನೆ ದೃಢೀಕೃತ ನಕಲು ನಿಪಿ.3
4. ವಾಹನ ತಪಾಸಣೆ ವರದಿಯ ದೃಢೀಕೃತ ನಕಲು ನಿಪಿ.4
5. ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು ನಿಪಿ.5
6. ಅಂತಿಮ ದೋಷಾರೋಪಣಾ ದೃಢೀಕೃತ ನಕಲು ನಿಪಿ.6

7. ಬಿಡುಗಡೆ ಸರಾಂಶದ ನಿಪಿ.7

8. ನಾಲ್ಕು ಔಷದಿ ಬಿಲ್ಲುಗಳು ನಿಪಿ.8 ರಿಂದ 11

9. 5 ಎಕ್ಸರೆ ಫೋಟೊಗಳು ನಿಪಿ.12 ರಿಂದ 16

10. ಆಧಾರ್ ಕಾರ್ಡ ನಿಪಿ.17

11. ಚಾಲನಾ ಪರವಾನಿಗೆ ಪತ್ರ ನಿಪಿ.18

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಶ್ರೀ.ಪಿ.ಟಿ.ಜಿ.ಕೆ ವಕೀಲರಿಂದ ಃ**

ನಾನು ಅಪಘಾತ ಕಾಲಕ್ಕೆ ಸಿದ್ದಾಪುರದ ಎಂ.ಜಿ. ರಸ್ತೆಯಲ್ಲಿ ಇರುವ ನನ್ನ ಮನೆಯಿಂದ ವಿರಾಜಪೇಟೆ ರಸ್ತೆಯಲ್ಲಿ ಇರುವ ಮಸೀದಿಗೆ ಹೋಗುತ್ತಿದ್ದೆ. ನನ್ನ ಸ್ನೇಹಿತನಿಗೆ ಸೇರಿದ ಸ್ಕೂಟಿಯಲ್ಲಿ ಹಿಂಭದಿ ಸವಾರನಾಗಿ ಹೋಗುತ್ತಿದ್ದೆ. ಅಪಘಾತ ಕಾಲಕ್ಕೆ ಬುಲೆರೊ ವಾಹನ ವಿರಾಜಪೇಟೆ ಕಡೆಯಿಂದ ಸಿದ್ದಾಪುರ ಪಟ್ಟಣದ ಕಡೆ ಬರುತ್ತಿತ್ತು. ಅಪಘಾತ ಅಪಾಧಿತ ಜೀಪನ್ನು ಮಾರುವ ಮೊದಲು ಸಂಭವಿಸಿದಯೋ ಅಥವಾ ನಂತರ ಸಂಭವಿಸಿದೆಯೋ ಎಂದರೆ ಸಾಕ್ಷಿ ಆ ವಿಚಾರ ನೆನಪಿಲ್ಲ ಆದರೆ ದಿನಾಂಕ 17.03.2024 ರಂದು ಅಪಘಾತ ಸಂಭವಿಸಿದೆ ಎನ್ನುತ್ತಾರೆ. ಅಪಘಾತ ಸ್ಥಳ ಪಟ್ಟಣ ಪ್ರದೇಶ ಆಗಿದ್ದರಿಂದ ಜೀಪ ಚಾಲಕ ತನ್ನ ವಾಹನವನ್ನು ಸಾವಕಾಶವಾಗಿ ನಡೆಸುತ್ತಿದ್ದ ಎಂದರೆ ಸರಿಯಲ್ಲ. ಸ್ಕೂಟಿ ಚಾಲಕ ಅತೀ ವೇಗ ಮತ್ತು

ಅತೀಜಾಗರೂಕತೆಯಿಂದ ತನ್ನ ವಾಹವನ್ನು ಚಾಲನೆ ಮಾಡಿ ಜೀಪ್ ಗೆ ಡಿಕ್ಕಿಹೊಡಿಸಿದ್ದಾನೆ ಎಂದರೆ ಸರಿಯಲ್ಲ. ನಾನು ಪ್ರಯಾಣ ಮಾಡುತ್ತಿದ್ದ ದ್ವೀಚಕ್ರ ವಹಾನವನ್ನು ಚಾಲನೆ ಮಾಡುತ್ತಿದ್ದ ಸಿರಾಜ್ ಈತನಿಗೆ ಚಾಲನಾ ಪರವಾನಿಗೆ ಪತ್ರ ಇತ್ತು. ಸದರಿ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲ. ಸಾಕ್ಷಿ ಮುಂದುವರೆದು ನನಗೆ ಸೇರಿದ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಆದರೆ ಸಿರಾಜ್ ಈತ ತನಗೆ ಚಾಲನಬಾ ಪರವಾನಿಗೆ ಪತ್ರ ಇದೆ ಎಂದು ಹೇಳಿದ್ದಾನೆ ಎನ್ನುತ್ತಾರೆ. ಅಪಾಧಿತ ಬುಲೆರೊ ವಾಹನ ಅಪಘಾತ ಕಾಲಕ್ಕೆ ವಿಮೆಗೆ ಒಳಪಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಅಪಘಾತದಲ್ಲಿ ನನ್ನ ಬಲಕಾಲಿಗೆ ಪೆಟ್ಟಾಗಿದೆ. ಸಾಕ್ಷಿ ಮುಂದುವರೆದು ಕಾಲಿನ ಬಲಕಾಲಿನ ಟಿಬಿಯಾ ಮತ್ತು ಫಿಬುಲಾ ಮೂಳೆ ಮುರಿತ ಆಗಿದ್ದಾವೆ ಎನ್ನುತ್ತಾರೆ. ಅಪಘಾತ ಸಂಭವಿಸಿದ ಕೂಡಲೇ ಸಿದ್ದಾಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಸಾಕ್ಷಿ ಮುಂದುವರೆದು ಸದರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಮಾತ್ರ ಕೊಡಲಾಗಿತ್ತು ಆ ನಂತರ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಕರೆತರಲಾಯಿತು ಎನ್ನುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ವ್ಯವಸ್ಥೆ ಇದೆ ಎಂದರೆ ಸರಿ. ಬುಲೆರೂ ವಾಹನದ ಚಾಲಕನನ್ನು ವಿಮೆ ಬಗ್ಗೆ ವಿಚಾರಿಸಿಲ್ಲ. ಅದೇ ರೀತಿ ಆತನ ಚಾಲನಾ ಪರವಾನಿಗೆ ಪತ್ರದ ಸಂಬಂಧ ಸಹ ನಾನು ವಿಚಾರಿಸಿಲ್ಲ. ಅಪಘಾತ ಕಾಲಕ್ಕೆ ಬುಲೆರೊ ವಾಹನದ ಚಾಲಕ ಜೀಪನ್ನು ಚಾಲನೆ ಮಾಡಲು ಚಾಲನಾ ಪರವಾನಿಗೆ ಪತ್ರ ಹೊಂದಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ

ಎನ್ನುತ್ತಾರೆ. ದೋಷಾರೋಪಣಾ ಪತ್ರದಲ್ಲಿ ಬುಲೆರೊ ವಾಹನ ಚಾಲಕ ಚಾಲನಾ ಪರವಾನಿಗೆ ಪತ್ರ ಹೊಂದರೆ ಇದಿದ್ದರಿಂದ ಈ ಸಂಬಂಧ ಆತನ ಮೇಲೆ ಅಪಾಧನೆ ಹೊರಿಸಲಾಗಿದೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಾನು ಎಲ್ಕ್ಟಿಕ್ ಮತ್ತು ಪ್ಲಬಿಂಗ್ ಕೆಲಸ ಮಾಡುತ್ತಿದ್ದೆ. ಎಲ್ಕ್ಟಿಕ್ ಮತ್ತು ಪ್ಲಬಿಂಗ್ ಕೆಲಸ ಪ್ರತಿದಿನ ಇರುತ್ತದೆ. ಅಪಘಾತ ಪೂರ್ವದಲ್ಲಿ ನನಗೆ ಪ್ರತಿದಿನ 1,000/- ಕೂಲಿ ಇತ್ತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆಗಾಗಿ 50 ಸಾವಿರ ರೂ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅಪಘಾತದಲ್ಲಿ ಯಾವುದೇ ತೀವ್ರ ಸ್ವರೂಪದ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಔಷದೋಪಚಾರಕ್ಕಾಗಿ ಮತ್ತು ಉತ್ತಮ ಪೌಶ್ಟಿಕಾಂಶ ಆಹಾರ ಪಡೆಯುವ ಉದ್ದೇಶದಿಂದ 60 ಸಾವಿರ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗೆ 25 ಸಾವಿರ ಅವಶ್ಯಕತೆ ಇದೆ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಅಪಾಧಿತ ವಾಹನ ರಶೀದ್ ಕಯ್ಯೂಮ್ ಇವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಎದುರುದಾರ ಮತ್ತು ಅಪಾಧಿತ ವಾಹನಕ್ಕೂ ನೋಂದಣಿ ಸಂಬಂಧ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬುಲೆರೊ ವಾಹವನ್ನು ಚಾಲನೆ ಮಾಡುತ್ತಿದ್ದ ಸಂತೋಷ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಆತನ ಮುಖ ಪರಿಚಯ ಇದೆ ಎನ್ನುತ್ತಾರೆ.

ಅಪಘಾತ ಕಾಲಕ್ಕೆ ಸಂತೋಷ ಈತನಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಹಾಲಿ ನಾನು ಮೊದಲಿನಂತೆ ಆರೋಗ್ಯವಾಗಿದ್ದು ಎಲ್ಲಾ ಕೆಲಸ ಕಾರ್ಯ ಮಾಡಬಲ್ಲೆ ಎಂದರೆ ಸರಿಯಲ್ಲ. ಸಿರಾಜ್ ಈತನ ದ್ವೀಚಕ್ರ ವಾಹನ ಅಪಘಾತ ಕಾಲಕ್ಕೆ ವಿಮೆಗೆ ಒಳಪಟ್ಟಿತ್ತಾ ಎಂದರೆ ಸಾಕ್ಷಿ ಈ ಸಂಬಂಧ ನನಗೆ ಮಾಹತಿ ಇಲ್ಲ ಎನ್ನುತ್ತಾರೆ. ದ್ವೀಚಕ್ರ ವಾಹನದ ಮಾಲೀಕನ ವಿರುದ್ಧ ಅಥವಾ ಅದರ ವಿಮೊ ಸಂಸ್ಥೆ ವಿರುದ್ಧ ಯಾವುದೇ ಅರ್ಜಿ ದಾಖಲು ಮಾಡಿಲ್ಲ.ದ್ವೀಚಕ್ರ ವಾಹನದ ಚಾಲಕನ ತಪ್ಪಿನಿಂದಾಗಿ ಈ ಅಪಘಾತ ಸಂಭವಿಸಿರುದರಿಂದ 2ನೇ ಎದುರುದಾರ ಸಂಸ್ಥೆ ನನಗೆ ಯಾವುದೇ ಪರಿಹಾರ ಕೊಡಲು ಭಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಔಷದಿ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯಬೇಕೆಂಬ ಉದ್ದೇಶದಿಂದ ಸೃಷ್ಟಿವಾಡಿ ತಂದು ನ್ಯಾಯಾಲಯದ ಮುಂದೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.